# ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು.

**ಓ.ಎಸ್ 254/2020**

| | | |
|---|---|---|
| ಸಾಕ್ಷಿಯ ಹೆಸರು | **:** ಟಿ.ಎ ವಿಜಯಕುಮಾರ | ಸಿ.ಡಬ್ಲ್ಯೂ ಃ 1 |
| ತಂದೆ/ಗಂಡನ ಹೆಸರು | ಃ ಅಣ್ಣೇಗೌಡ | |
| ವಯಸ್ಸು | ಃ 47 ವರ್ಷ | |
| ವೃತ್ತಿ | ಃ ತಾಲ್ಲೂಕು ಭೂ ಮಾಪಕರು | |
| ವಾಸಸ್ಥಳ | ಃ ಮೈಸೂರು | |

**ಸಾಕ್ಷಿಗೆ ದಿನಾಂಕ 21.06.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ**

ನಾನು ಕಳೆದ 5 ವರ್ಷಗಳಿಂದ ಹುಣಸೂರು ತಾಲ್ಲೂಕಿನಲ್ಲಿ ಭೂ ಮಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಆದೇಶದಂತೆ ನಾನು ಸರ್ವೆ ನಂಬರ 51/2 ಜಮೀನುಗಳನ್ನು ಅಳತೆ ಮಾಡಿ ವರದಿ ಸಲ್ಲಿಸುವಂತೆ ಆದೇಶವಾಗಿದ್ದು, ನಾನು ವಾದಿ ಮತ್ತು ಪ್ರತಿವಾದಿರವರಿಗೆ 7 ದಿನ ಮುಂಚಿತವಾಗಿ ನೋಟೀಸ್ ನ್ನು ನೀಡಿರುತ್ತೇನೆ. ಅಳತೆ ಸಂದರ್ಭದಲ್ಲಿವಾದಿ ಮತ್ತು ಪ್ರತಿವಾದಿರವರು ಹಾಜರಿದ್ದರು. ಸರ್ವೆ ನಂಬರ 51/2 2 ಎಕರೆ 17 ಗುಂಟೆ ಜಮೀನನ್ನು ಅಳತೆ ಮಾಡಿ ಗಡಿ ಗುರುತು ಮಾಡಿರುತ್ತೇನೆ. ಸರ್ವೆ ನಂಬರ 51/2 ಅಳತೆ ಮಾಡಿದಾಗ ಸರ್ವೆ ನಂಬರ 51/1 ರ ಹಿಡುವಳಿದಾರರಾದ ಪ್ರತಿವಾದಿರವರು 0.7 ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ನಾನು ನಕ್ಷೆಯೊಂದಿಗೆ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ವರದಿಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು ವರದಿಯನ್ನು ನಿಸಿ-1 ಎಂದು, ಸಾಕ್ಷಿಯ ಸಹಿಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾರ್ಟಿಸವಾಲಿಗೆ ಕಾಲವಕಾಶವನ್ನು ಕೇಳಿದ್ದು ಕಾಲವಕಾಶವನ್ನು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹುಣಸೂರು.